ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾಮೆ

25ನೆ ಜನವರಿ 1907ನೆ ಇಸವಿ.

ಶಿವನೊಗ್ಗ ಡಿಸ್ಟ್ರಿಕ್ಟ್.

ಜೋಗ ಫಾರೆಸ್ಟ್.

ಸಾಗರ ತಾಲ್ಲೂಕು.

1. ಸ್ರ 1900ನೆ ಇಸವಿ 11ನೆ ಖಾನೂನಾದ ಮೈಸೂರು ಫಾರೆಸ್ಟ್ ರೆಗ್ಯುಲೇಶ್ರ್ 5ನೆ ಪ್ರಕರಣವನ್ನನುಸರಿಸಿ ಹಿಂದಿನ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರವರಾದ ಮೆ॥ ಬಾಲಸುಂದರಂ ಅಯ್ಯರವರು 1903ನೆ ಇಸವಿ ಮೇ ತಾರೀಖು 26ರಲ್ಲು ಫಾಯಿಷ್ ಮಾಡಿದ ಇಸ್ತಿಹಾರ್‌ನಾಮೆಕ್ಕೆ ಸದರಿ ಸೆಟ್ಲ್‌ಮೆಂಟ್‌ಗೆ ಸಂಬಂಧಪಟ್ಟ ಗ್ರಾಮಸ್ಥರು ಗಮನ ಕೊಡಬೇಕು.

2. ಲೇಟ್ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿದ್ದ ಮೆ॥ ಆನಂದರಾಯರವರು ಜೋಗ ಮೊಕ್ಕಾಂನಲ್ಲಿ 1906ನೆ ಇಸವಿ ಏಪ್ರಿಲ್ ತಾರೀಖು 27ರಲ್ಲಿ ಸಂಬಂಧಪಟ್ಟ ಗ್ರಾಮಸ್ಥರಿಗೆ ತಿಳುಹಿಸಿದ ಆರ್ಡರ್ ಅನುಸರಿಸಿ ಐಯಿಂದ ಸಾಗರ ತಾಲ್ಲೂಕು ಅಮಲ್ದಾರ್‌ರವರ ದ್ವಾರಾ ತಿಳುಹಿಸಬಹುದಾದ ತಾರೀಖಿನಲ್ಲಿ ಸೆಟ್ಲ್‌ಮೆಂಟ್ ಉಪಕ್ರಮಿಸಲ್ಪಡುತ್ತೆ.

3. ಸದರಿ ಫಾರೆಸ್ಟ್ ಜಕ್ಕ್ತು ಬಂದಿಯನ್ನು ಮೇಲ್ತಂಡ 1ನೆ ಪ್ಯಾರಾದಲ್ಲಿ ನಮೂದಿರುವ 1903ನೆ ಇಸವಿ ಮೇ ತಾರೀಖು 26ರಲ್ಲಿ ಫಾಯಿಷ್ಮಾಡಿದ ಇಸ್ತಿಹಾರ್‌ನಲ್ಲಿ ತಿಳಿದುಕೊಳ್ಳಬಹುದು.

ಎಂ. ಶ್ಯಾಮರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

---

ನೋಟಿಸ್.

ತಾರೀಖು 1ನೆ ಫೆಬ್ರವರಿ 1907.

ಗುಡಿಯಾತಂ ತಾಲ್ಲೂಕು ರಾವಾಲೆ ಗ್ರಾಮದ ಕಂಟ್ರಾಕ್ಟರ್ (ಮೃತಪಟ್ಟ) ಸಂಜೀವ್ಯೆಯ್ಯನೆಂಬುವನು ಖಾತರಿಗಾಗಿ ಇಟ್ಟಿದ್ದ 25 ರೂಪಾಯಿ ಬೇವಣಿ ಮೊಬಲಗು ಬೆಂಗಳೂರು ಫಾರೆಸ್ಟ್ ರೇಂಜಾಫೀಸರಲ್ಲಿ ಪಾವತಿ ಮಾಡದೆ ನಿಂತಿರುತ್ತೆ.

ಸದರಿ ಮೃತಪಟ್ಟ ಕಂಟ್ರಾಕ್ಟರನ ವಾರಸುದಾರರು ಯಾರಾದರೂ ಇದ್ದಲ್ಲಿ ಸದರಿ ಹಣಕ್ಕಾಗಿ ತಕ್ಕ ಸಮಜಾಯಿಷಿಯೊಡನೆ ಈ ತಾರೀಖು ಲಾಗಾಯಿತು 3 ತಿಂಗಳುಗಳೊಳಗಾಗಿ ನಮ್ಮ ಆಫೀಸಿಗೆ ಬರೆದುಕೊಳ್ಳಬೇಕು. ತಪ್ಪಿದಲ್ಲಿ ಸದರಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡೆಪ್ಯೂಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟ್.

---

ನೋಟಿಫಿಕೇಶ್ರ್.

ತಾರೀಖು 26ನೆ ಜನವರಿ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನೆಯನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸುತ್ತೆ.

| ನಂ. | ಡಿಪೋಗಳ ಹೆಸರು. | ಹರಾಜು ತಾರೀಖು | ನಾಟುಗಳ ವಿವರ | ಸಲೆ ಅಡಿ. ನಂಬರ್. | ಸಲೆ ಅಡಿ. ಅಡಿ | ಪರಾ. |
|---|---|---|---|---|---|---|
| 1 | ಮೈಸೂರು ಉಡಿಯಾರ್ಡ್ | 25—2—07 | ಮತ್ತಿನಾಟಾ | 650 | 1,000 | ಸ್ಯಾಂಡಲ್ ಮತ್ತು ಜಾಜ್ಪೆ ಹೊರತು |
| | | | ಸಾಗ್ವಾನಿನಾಟಾ | 650 | 25,000 | |
| | | | ಡಿಟೋ ತುಂಡುಗಳು | 400 | 5,000 | |
| | | | ಹೊನ್ನೆನಾಟಾ | 50 | 1,000 | |
| 2 | ನಂಜನಗೂಡು ಡಿಪೋ | 26—2—07 | ಸಾಗ್ವಾನಿನಾಟಾ | 150 | 4,000 | |
| | | | ಡಿಟೋ ತುಂಡುಗಳು | 150 | 3,000 | |
| | | | ಹೊನ್ನೆನಾಟಾ | 100 | 1,500 | |
| | | | ಬೀಡಿನಾಟಾ | 100 | 1,500 | |

ಹರಾಜು ಪರತ್ತು :—1895ನೆ ಇಸವಿ ಏಪ್ರಿಲ್ ತಾರೀಖು 25ನೆ ವರ್ತಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚ್ 15ನೆ ವರ್ತಂ ನಂಬರ್ 15229—R. F. 155—92ನೆ ನೋಟಿಫಿಕೇಶ್ರ್ ನೋಡಬೇಕು.

ಎಂ. ಜೆ. ರಾಮರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.